> **'ಕನ್ನಡ ಮಾಧ್ಯಮಕ್ಕೆ ಪ್ರೋತ್ಸಾಹ ಕೊಡುವುದು (ರಾಜ್ಯ) ಸರ್ಕಾರದ ಅಧಿಕೃತ ನೀತಿಯಾಗಿದ್ದರೂ ಆ ದಿಕ್ಕಿನಲ್ಲಿ ಅದು ಯಾವ ಆಸಕ್ತಿಯನ್ನೂ ತಳೆದಿಲ್ಲ'**

ಯಾವ ಕಚೇರಿಯಲ್ಲಿಯೂ ಕನ್ನಡವನ್ನು ಪರಿಣಾಮಕಾರಿಯಾಗಿ ಬಳಸುತ್ತಿಲ್ಲ. ಸರ್ಕಾರಕ್ಕೇ ಇದರಲ್ಲಿ ಆಸಕ್ತಿ ಇಲ್ಲವೆಂದು ತಿಳಿದಿರುವ ಅಧಿಕಾರಿಗಳು ಕನ್ನಡವನ್ನು ಕಡೆಗಣಿಸುವುದು ಸಹಜವಾಗಿದೆ. ಕನ್ನಡದ ಬಗ್ಗೆ ನಿಜವಾದ ಆಸಕ್ತಿಯುಳ್ಳ, ಸರ್ಕಾರದ ನೀತಿಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಉತ್ಸಾಹವುಳ್ಳ ಕೆಲವು ಅಧಿಕಾರಿಗಳು ಕನ್ನಡವನ್ನು ಬಳಸದ ಮೇಲಧಿಕಾರಿಗಳ ಅವಕೃಪೆಗೆ ಪಾತ್ರವಾಗಿರುವ ಸಂದರ್ಭಗಳು ಅನೇಕ ಇವೆ. ಇಂಥ ಕೆಲಸಗಾರರಿಗೆ ಕಿರುಕುಳ, ವರ್ಗಾವಣೆ, ಬಡ್ತಿ ನಿಲ್ಲಿಸುವ ಬೆದರಿಕೆ, ಮೊದಲಾದವು ತಪ್ಪಿದ್ದಲ್ಲ. ಸರ್ಕಾರದ ನೀತಿಯನ್ನು ಅನುಸರಿಸಿದರೂ ಅವರಿಗೆ ಈ ಬಗೆಯ ಪ್ರೋತ್ಸಾಹ ದೊರಕಿದರೆ ಕನ್ನಡವನ್ನು ಯಾರಾದರೂ ಯಾಕೆ ಬಳಸುತ್ತಾರೆ? ಕನ್ನಡ ಆಡಳಿತದಲ್ಲಿ ನೆಲೆಯಾಗುವುದು ಸರ್ಕಾರದ ಕೇವಲ ಘೋಷಣೆಯಿಂದಲ್ಲ; ದೃಢವಾದ ರಾಜಕೀಯ ಮನಸ್ಸಿನಿಂದ ಕರ್ನಾಟಕದಲ್ಲಿ ಇದುವರೆಗೆ ಯಾರೂ ಇಂಥ ಮನಸ್ಸು ಮಾಡಿಲ್ಲ. ತಮಿಳರಿಗಾಗಲಿ, ಬಂಗಾಳಿಗಳಿಗಾಗಲಿ ಇದನ್ನು ಹೇಳಿಕೊಡಬೇಕಾಗಿಲ್ಲ. ಒಬ್ಬ ಮುಖ್ಯಮಂತ್ರಿ ಇದನ್ನು ಪಂಜಾಬಿನಲ್ಲಿ ಆರೇ ತಿಂಗಳ ಅವಧಿಯಲ್ಲಿ ಸಾಧಿಸಿದ. ಕರ್ಪೂರಿ ಥಾಕೂರ್ ಬಿಹಾರಿನಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಹಿಂದಿಯಲ್ಲಿ ಸಹಿ ಮಾಡದ ಐ.ಎ.ಎಸ್. ಅಧಕಾರಿಯೊಬ್ಬನನ್ನು ಅಮಾನತ್ತಿನಲ್ಲಿರಿಸಿದರು. ಇತರ ಅನೇಕ ರಾಜ್ಯಗಳಲ್ಲಿ ನಿಧಾನವಾಗಿಯಾದರೂ ಪರಿಣಾಮಕಾರಿಯಾಗಿ ರಾಜ್ಯ ಭಾಷೆಗಳು ಆಡಳಿತದಲ್ಲಿ ಪಾಲುಗೊಳ್ಳುತ್ತಿವೆ. ಕರ್ನಾಟಕ ಮಾತ್ರ ಈ ದಿಕ್ಕಿನಲ್ಲಿ ಕ್ರಿಯಾಶೂನ್ಯವಾಗಿದೆ.

ಭಾಷಾನುಗುಣ ಪ್ರಾಂತರಚನೆಯ ತತ್ವವೇ ಮೂಲತಃ ಜನರ ಭಾಷೆಯಲ್ಲಿ ಆಡಳಿತ ನಡೆಯಬೇಕು ಎಂಬ ಉದ್ದೇಶವನ್ನು ಅವಲಂಬಿಸಿದ್ದು. ಅಕ್ಷರಸ್ಥರ ಸಂಖ್ಯೆ ತುಂಬ ಕಡಮೆ ಇರುವ ನಾಡಿನಲ್ಲೂ ನೂರಕ್ಕೆ ಒಬ್ಬಿಬ್ಬರು ಬಲ್ಲ ಭಾಷೆಯಲ್ಲಿ ಕೋರ್ಟುಗಳ ವ್ಯವಹಾರ, ಸರ್ಕಾರದ ಆಡಳಿತ ನಡೆದರೆ ಮೋಸವಲ್ಲದೆ ಮತ್ತೇನು? ಜನಸಾಮಾನ್ಯರು ಸರ್ಕಾರದ ಆಗುಹೋಗುಗಳಲ್ಲಿ ಭಾಗವಹಿಸುವುದು ಸಾಧ್ಯವೇ ಆಗುವುದಿಲ್ಲ. ಪ್ರತಿಯೊಂದು ರಾಜ್ಯದಲ್ಲಿಯೂ ಆಯಾ ರಾಜ್ಯ ಭಾಷೆಯೇ ಅಧಿಕೃತವಾದದ್ದು. ಅನಕ್ಷರಸ್ಥರೇ ಆಗಿದ್ದರೂ ಕೋರ್ಟು ತೀರ್ಮಾನವನ್ನು ತಮಗೆ ಗೊತ್ತಾಗದ ಭಾಷೆಯಲ್ಲಿ ಕೇಳುವುದು ತಮಗೆ ಗೊತ್ತಾಗದ ಭಾಷೆಯಲ್ಲಿ ಸರ್ಕಾರದ ಆದೇಶಗಳನ್ನು ಪಡೆಯುವುದು ಈ ದೇಶದಲ್ಲಿ ಮಾತ್ರ ನಡೆಯುವ ಘಟನೆ. ಏಕೆಂದರೆ ಅಧಿಕೃತವಾದ ರಾಜ್ಯ ಭಾಷೆಗಳನ್ನು ಬಳಸುವುದರಲ್ಲಿ ಸರ್ಕಾರಕ್ಕೆ ಆಸಕ್ತಿ ಇಲ್ಲದಿರುವುದು. ಇದು ಎಲ್ಲಿಯವರೆಗೆ ನಡೆಯುತ್ತಿರುತ್ತದೋ ಅಲ್ಲಿಯವರೆಗೆ ಜನರಿಗೆ ಸ್ವಾತಂತ್ರ್ಯದ ಅರ್ಥ ತಿಳಿಯುವುದಿಲ್ಲ; ಫಲ ದೊರಕುವುದಿಲ್ಲ.

ಸರ್ಕಾರದಲ್ಲಿ ಕನ್ನಡಕ್ಕೆ ಪುರಸ್ಕಾರ ಯಾಕಿಲ್ಲ? ಪ್ರಜಾಪ್ರಭುತ್ವ ಪದ್ಧತಿಯಂತೆ ಆಯ್ಕೆಯಾಗಿ ಬಂದವರು ಮಂತ್ರಿಗಳಾಗುತ್ತಾರೆ. ಹೀಗೆ ಅಧಿಕಾರ ವಹಿಸುವವರಿಗೆ ಅನುಭವ ಇರುವುದಿಲ್ಲ. ಸರ್ಕಾರದ ರೀತಿ ರಿವಾಜುಗಳು ತಿಳಿಯುವುದಿಲ್ಲ. ಆದ್ದರಿಂದ ಸಹಜವಾಗಿಯೇ ಅವರು ಪಟ್ಟಭದ್ರರಾದ ಉನ್ನತ ಅಧಿಕಾರಿಗಳ ಕೈಗೊಂಬೆಗಳಾಗಿರುತ್ತಾರೆ. ಮಂತ್ರಿಗಳು ಬರುತ್ತಾರೆ,